ASO-AD-HKD13

# <u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಆಸಾನಿ.18/ಆಡಳಿತ-2/2016-17

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-01, ದಿನಾಂಕ 21.02.2017.

ವಿಷಯ: ಈ ನಿರ್ದೇಶನಾಲಯದ ಸಹಾಯಕ ಸಾಂಖ್ಯಿಕ ಅಧಿಕಾರಿಗಳ ವೃಂದದಿಂದ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ: ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಯಿಂದ ಸಹಾಯಕ ನಿರ್ದೇಶಕರ ಹುದ್ದೆಯ ಮುಂಬಡ್ತಿಗೆ ಸಂಬಂಧಿಸಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿ ದಿನಾಂಕ 12.12.2016.

><><><

## <u>ಕಚೇರಿ ಆದೇಶ ಸಂಖ್ಯೆ: ಆಡಳಿತ/811/2016-17</u>

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸೇವೆಗೆ ಸೇರಿದ ಈ ಕೆಳಗೆ ತಿಳಿಸಲಾದ **"ರಾಜ್ಯವ್ಯಾಪಿ ಸ್ಥಳೀಯ ವೃಂದದ"** ಸಹಾಯಕ ಸಾಂಖ್ಯಿಕ ಅಧಿಕಾರಿಗಳಿಗೆ (ವೇತನ ಶ್ರೇಣಿ ರೂ. 20000-36300) ಸಹಾಯಕ ನಿರ್ದೇಶಕರ ಗುಂಪು **"ಬಿ"** ಹುದ್ದೆಗೆ (ವೇತನ ಶ್ರೇಣಿ ರೂ. 22800-600-24600-700-28800-800-33600-900-39000-1050-43200) ಬಡ್ತಿ ನೀಡಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ಹೆಸರಿನ ಮುಂದೆ ನಮೂದಿಸಿರುವ ಕಚೇರಿಯಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಿಸಲಾಗಿದೆ. ಸದರಿ ನೌಕರರು ಮುಂಬಡ್ತಿ ಹುದ್ದೆಗೆ ವರದಿ ಮಾಡಿಕೊಂಡ ದಿನಾಂಕದಿಂದ ಆರ್ಥಿಕ ಲಾಭಕ್ಕೆ ಅರ್ಹರಿರುತ್ತಾರೆ.

| **ಕ್ರ. ಸಂ.** | **ಸಹಾಯಕ ಸಾಂಖ್ಯಿಕ ಅಧಿಕಾರಿಯ ಹೆಸರು, ಕಚೇರಿ ಮತ್ತು ಸ್ಥಳ ಶ್ರೀ/ಶ್ರೀಮತಿ** | **ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಿ ನೇಮಕಾತಿ ಮಾಡಲಾದ ಕಚೇರಿ ಮತ್ತು ಸ್ಥಳ** |
|---|---|---|
| **1** | **2** | **3** |
| 1 | **ಪತ್ರಿಬಸಪ್ಪ ಎನ್.ಕೆ**<br>ಜಿಲ್ಲಾ ಪಂಚಾಯತ್, ಬಳ್ಳಾರಿ | ಮಹಾನಗರಪಾಲಿಕೆ, ಬಳ್ಳಾರಿ ಇಲ್ಲಿ ಖಾಲಿ ಇರುವ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಲು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಲಾಗಿದೆ |
| 2 | **ಮುರ್ತುಜಾ ಹುಸೇನ್**<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಬಳ್ಳಾರಿ | ಜಿಲ್ಲಾಧಿಕಾರಿಗಳ ಕಚೇರಿ, (ಸಾಮಾಜಿಕ ಭದ್ರತೆ ಮತ್ತು ವೇತನಗಳ ಶಾಖೆ), ಬಳ್ಳಾರಿ |
| 3 | **ಸಂತೋಷ**<br>ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಬೀದರ್ | ತಾಲ್ಲೂಕು ಪಂಚಾಯತ್, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ |

ಮೇಲೆ ತಿಳಿಸಲಾದ ಬಡ್ತಿ ಹೊಂದಿರುವ ಸಹಾಯಕ ಸಾಂಖ್ಯಿಕ ಅಧಿಕಾರಿಯವರು ಕಾಲಂ-3ರಲ್ಲಿ ನೇಮಿಸಲಾಗಿರುವ ಹುದ್ದೆಯಲ್ಲಿ ತಕ್ಷಣ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು.

ಮುಂದುವರಿದಿದೆ---

ಮೇಲ್ಕಂಡ ಆದೇಶವು ಹೈದರಾಬಾದ್ ಕರ್ನಾಟಕ ಪ್ರಾಂತ್ಯದವರಿಗೆ ರೋಸ್ಟರ್ ಬಿಂದು ಅಳವಡಿಕೆ ಬಗ್ಗೆ ಮುಂದೆ ಉದ್ಭವಿಸಬಹುದಾದ ಆಕ್ಷೇಪಣೆಗಳಿಗೆ ಸರ್ಕಾರದಿಂದ/ನ್ಯಾಯಲಯದಿಂದ ಹೊರಡಿಸಬಹುದಾದ ಆದೇಶಗಳನುಸಾರ ಷರತ್ತುಗಳಿಗೆ ಒಳಪಟ್ಟಿರುತ್ತದೆ.

(ಕೆ.ವಿ. ಸುಬ್ರಮಣ್ಯಂ)
ನಿರ್ದೇಶಕರು

<u>ಪ್ರತಿಯನ್ನು:</u>

1. ಮಾನ್ಯ ಯೋಜನಾ ಮತ್ತು ಸಾಂಖ್ಯಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು-560001 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಕ್ರಮ ಸಂಖ್ಯೆ: 1 ರಲ್ಲಿರುವ ಅಧಿಕಾರಿಗಳ ಸೇವೆಯನ್ನು ಸದರಿಯವರ ಹೆಸರಿನ ಮುಂದೆ ಸೂಚಿಸಿರುವ ಮಹಾನಗರಪಾಲಿಕೆಗೆ ಮರುಸ್ಥಳನಿಯುಕ್ತಿಗೊಳಿಸಲು ತಮ್ಮ ವಶಕ್ಕೆ ನೀಡಲಾಗಿದೆ.
4. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಹಾಲೇಖಪಾಲರು, ಕರ್ನಾಟಕ (ಜಿಇ ಸೆಲ್-2/ಸಿ), ಬೆಂಗಳೂರು.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
7. ಆಯುಕ್ತರು, ಮಹಾನಗರಪಾಲಿಕೆ, ಬಳ್ಳಾರಿ.
8. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ
9. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ / ಬೀದರ್ ಜಿಲ್ಲೆ.
10. ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ / ಬೀದರ್ ಜಿಲ್ಲೆ
11. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬಳ್ಳಾರಿ.
12. ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.
13. ಕೇಂದ್ರ ಕಚೇರಿಯ ಎಲ್ಲಾ ಜಂಟಿ ನಿರ್ದೇಶಕರುಗಳಿಗೆ.
14. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು.
15. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
16. ಜಿಲ್ಲಾ ಖಜಾನಾಧಿಕಾರಿಗಳು,
17. ಪತ್ರಾಂಕಿತ ವ್ಯವಸ್ಥಾಪಕರು, ಆಡಳಿತ / ಲೆಕ್ಕ ವಿಭಾಗ.
18. ಉಪಾಧ್ಯಕ್ಷರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನೌಕರರ ಸಹಕಾರ ಸಂಘ ನಿಯಮಿತ, 6ನೇ ಮಹಡಿ, ಬಹುಮಹಡಿಕಟ್ಟಡ, ಬೆಂಗಳೂರು.
19. ಸಂಬಂಧಿಸಿದ ನೌಕರರಿಗೆ.
20. ಕೇಂದ್ರ ಕಚೇರಿಯ ಎಲ್ಲಾ ಅಧೀಕ್ಷಕರಿಗೆ.
21. ಮಾನವ ಸಂಪನ್ಮೂಲ ವಿಭಾಗ.
22. ಕಚೇರಿ ಆದೇಶದ ಕಡತಕ್ಕೆ.
23. ಕಚೇರಿ ಪ್ರತಿ.